ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

48ನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸಭೆ ಹಾಗೂ 2024ನೇ ಸಾಲಿನ 3ನೇ ಸಭೆಯ ನಡಾವಳಿಗಳು

ದಿನಾಂಕ : ಶುಕ್ರವಾರ, 27 ಸೆಪ್ಟೆಂಬರ್ 2024
ಸಮಯ : ಪೂರ್ವಾಹ್ನ 11 : 00 ಘಂಟೆ
ಸ್ಥಳ : ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **ವಿದ್ಯಾವಿಷಯಕ್ ಪರಿಷತ್ತಿನ 48ನೇ ಸಾಮಾನ್ಯ ಸಭೆಯ ಹಾಗೂ 2024ನೇ ಸಾಲಿನ 3ನೇ ಸಭೆಯು** ದಿನಾಂಕ **27 ಸೆಪ್ಟೆಂಬರ್ 2024** ರಂದು **ಪೂರ್ವಾಹ್ನ 11.00** ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

I. ಹಾಜರಿದ್ದ ಸದಸ್ಯರು

1. **ಪ್ರೊ. ಸಿ. ಎಂ. ತ್ಯಾಗರಾಜ**	**ಕುಲಪತಿಗಳು ಹಾಗೂ ಅಧ್ಯಕ್ಷರು**
2. ಶ್ರೀ ಆಯ್. ಎಸ್. ಪವಾರ	ಸದಸ್ಯರು
3. ಪ್ರೊ. ಬಿ. ಎಂ. ಕೋಲಾರ	ಸದಸ್ಯರು
4. ಪ್ರೊ. ಸಿದ್ಧಗೌಡ ಪಾಟೀಲ್	ಸದಸ್ಯರು
5. ಡಾ. ಎಸ್. ಎ. ಪತಂಗಿ	ಸದಸ್ಯರು
6. ಡಾ. ವಿರಾಜ ಮೋದಿ	ಸದಸ್ಯರು
7. ಪ್ರೊ. ಯು. ಎಂ. ಶಿವನಗೌಡರ್	ಸದಸ್ಯರು
8. ಡಾ. ವಿ. ಪಿ. ಕುರಿ	ಸದಸ್ಯರು
9. ಶ್ರೀ ಜಿ. ಎಚ್. ಮನ್ನೂರ	ಸದಸ್ಯರು
10. ಡಾ.(ಶ್ರೀಮತಿ) ನಿರ್ಮಲಾ ಜಿ. ಭಟ್ಟಲ	ಸದಸ್ಯರು
11. ಶ್ರೀ ಶಿವಕುಮಾರ ವ್ಹಿ. ಪರಾಂಡೆ	ಸದಸ್ಯರು
12. ಪ್ರೊ. ಡಿ. ಎನ್. ಪಾಟೀಲ್	ಸದಸ್ಯರು
13. ಪ್ರೊ. ಬಾಲಚಂದ್ರ ಹೆಗಡೆ	ಸದಸ್ಯರು
14. ಪ್ರೊ. ಕಾಂತರಾಜು ಕಾಮಣ್ಣ	ಸದಸ್ಯರು
15. ಪ್ರೊ. ಆರ್. ಎನ್. ಮನಗೂಳಿ	ಸದಸ್ಯರು
16. ಪ್ರೊ. ಬಸವರಾಜ ಪದ್ಮಶಾಲಿ	ಸದಸ್ಯರು
17. ಪ್ರೊ. ಎಂ. ಸಿ. ಎರ್ರಿಸ್ವಾಮಿ	ಸದಸ್ಯರು
18. ಪ್ರೊ. ಎಸ್. ಬಿ. ಆಕಾಶ	ಸದಸ್ಯರು
19. ಪ್ರೊ. ವಾಯ್. ಎಸ್. ಬಲವಂತಗೋಳ	ಸದಸ್ಯರು
20.ಪ್ರೊ. ವ್ಹಿ. ಎಂ. ಬಂಕಾಪೂರ, **(ಗ್ರಂಥಪಾಲಕರು)**	ಸದಸ್ಯರು
21. ಪ್ರೊ. ವಿಶ್ವನಾಥ ಅವಟಿ, **(ನಿರ್ದೇಶಕರು, (ಯೋ.ಮೇ.ಮೌ ಮಂಡಳಿ))**	ಸದಸ್ಯರು
22. ಶ್ರೀ ಎಂ.ಎ. ಸಪ್ನ **(ಹಣಕಾಸು ಅಧಿಕಾರಿಗಳು)**	ಸದಸ್ಯರು
23.ಶ್ರೀ ರವೀಂದ್ರನಾಥ ಕದಮ್, **(ಕುಲಸಚಿವರು(ಮೌಲ್ಯಮಾಪನ)**	ಸದಸ್ಯರು
24. ಸಂತೋಷ ಕಾಮಗೌಡ ಕೆ.ಎ.ಎಸ್.(ಹಿರಿಯ ಶ್ರೇಣಿ)	**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**

II. ಹಾಜರಾಗದ ಸದಸ್ಯರು

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ	ಸದಸ್ಯರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ	ಸದಸ್ಯರು
3. ಶ್ರೀ ಅಭಯ ಪಾಟೀಲ್, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
4. ಶ್ರೀ ಸಿದ್ದು ಸವದಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
5. ಶ್ರೀ ಪಾಟೀಲ.ಎ.ಎಸ್.(ನಡಹಳ್ಳಿ), ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
6. ಶ್ರೀ. ಪ್ರದೀಪ ಶೆಟ್ಟರ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು	ಸದಸ್ಯರು
7. ಡಾ. ತಳವಾರ್ ಸಾಬಣ್ಣ, ವಿಧಾನ ಪರಿಷತ್ತಿನ ಶಾಸಕರು	ಸದಸ್ಯರು
8. ಪ್ರೊ. ಅಶೋಕ ಡಿ' ಸೋಜಾ **(ನಿರ್ದೇಶಕರು, ಸಿ.ಡಿ.ಸಿ. ವಿಭಾಗ)**	ಸದಸ್ಯರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156

ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ **27 ಸೆಪ್ಟೆಂಬರ್ 2024** ರಂದು ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿಯಲ್ಲಿ ಜರುಗಿದ ವಿಶ್ವವಿದ್ಯಾಲಯದ **48ನೇ ಹಾಗೂ 2024ನೇ ಸಾಲಿನ 3ನೇ** ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31.

2. ಮಾನ್ಯ ಕುಲಪತಿಗಳ ಸಭೆ ನಡೆಸಲು ನೀಡಿದ ಅನುಮೋದನೆ ದಿನಾಂಕ: 12.09.2024.

3. ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 12.09.2024.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ.(30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 48ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯನ್ನು ದಿನಾಂಕ: 27.09.2024 ರಂದು ಆಯೋಜನೆ ಮಾಡಲಾಗಿತ್ತು. ಸರ್ಕಾರದಿಂದ ಕುಲಸಚಿವರಾಗಿ(ಆಡಳಿತ) ನಿಯೋಜನೆಗೊಂಡು ಪ್ರಥಮ ಬಾರಿಗೆ ವಿದ್ಯಾವಿಷಯಕ್ ಪರಿಷತ್ ಸಭೆಗೆ ಹಾಜರಾದ ಸಂತೋಷ ಕಾಮಗಾಡ ಕೆ.ಎ.ಎಸ್(ಹಿರಿಯ ಶ್ರೇಣಿ) ಹಾಗೂ ಪ್ರೊ. ಆರ್. ಎನ್. ಮನಗೂಳಿ, ಪ್ರಾಧ್ಯಾಪಕರು, ಅಪರಾಧಶಾಸ್ತ್ರ ಮತ್ತು ನ್ಯಾಯಿಕ ಅಪರಾಧ ವಿಭಾಗ, ಶ್ರೀ ಶಿವಕುಮಾರ ಪರಾಂಡೆ, ಪ್ರಾಂಶುಪಾಲರು ಇವರುಗಳಿಗೆ ಹೂಗುಚ್ಛ ನೀಡಿ ಸಭೆಗೆ ಬರಮಾಡಿಕೊಳ್ಳಲಾಯಿತು. ತದನಂತರ, ಸಭೆಯ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರುಗಳನ್ನು ಉಪಕುಲಸಚಿವರು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕ್ಷೀಣಿಸುತ್ತಿರುವುದು ಕಳವಳದ ಸಂಗತಿಯಾಗಿದೆ. ವಿದ್ಯಾವಿಷಯಕ್ ಪರಿಷತ್ ಸಭೆಯು ವಿಶ್ವವಿದ್ಯಾಲಯದ ಪರಮೋಚ್ಚ ಅಂಗವಾಗಿದ್ದು, ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಕುರಿತಾಗಿ ವಿಶ್ವವಿದ್ಯಾಲಯದಲ್ಲಿ ಹಲವಾರು ಕಾರ್ಯಕ್ರಮ, ಸಮ್ಮೇಳನಗಳನ್ನು ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿಯೂ ಕೂಡ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ ಎಂದರು. ಹಲವಾರು ಅಡೆ–ತಡೆಗಳ ನಡುವೆ ಪ್ರಸ್ತುತ ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ(PM-USHA) ಯೋಜನೆಯ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ಈ ಕಾರ್ಯಕ್ಕೆ ಶ್ರಮ ವಹಿಸಿದ ಪ್ರೊ. ಬಿ.ಜಿ. ಹೆಗಡೆ ಇವರಿಗೆ ಅಭಿನಂದಿಸಿದರು ಹಾಗೂ ಅಕ್ಟೋಬರ್–2024 ರಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವ ಜರುಗಲಿದ್ದು, ಪ್ರೊ. ದೇವೆಂದ್ರ ಜಾಲಿಹಾಳ, ನಿರ್ದೇಶಕರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಗುವಾಹಾಟಿ ಇವರು ಘಟಿಕೋತ್ಸವ ಭಾಷಣವನ್ನು ನೆರವೇರಿಸಲಿರುವ ಸಂತಸದ ವಿಷಯವನ್ನು ಸಭೆಗೆ ತಿಳಿಸಿದರು.

ತದನಂತರ, ಕುಲಸಚಿವರು ಮತ್ತೊಮ್ಮೆ ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

ಕ್ರ.ಸಂ.	ಸಂಖ್ಯೆ	ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು
1	2024/09/01	ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು.
ತೀರ್ಮಾನ		**ದಿನಾಂಕ: 14.06.2024 ರ ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.**

2	2024/09/02	2024–25 ನೇ ಶೈಕ್ಷಣಿಕ ಸಾಲಿನಲ್ಲಿ 3 ಮತ್ತು 5 ನೇ ಸೆಮಿಸ್ಟರ್‌ಗಳ ತರಗತಿಗಳನ್ನು 50:50 ಅನುಪಾತದಲ್ಲಿ (Hybrid Mode) ನಡೆಸುವ ಕುರಿತು.
ತೀರ್ಮಾನ		**2024–25 ನೇ ಶೈಕ್ಷಣಿಕ ಸಾಲಿನಲ್ಲಿ 3 ಮತ್ತು 5 ನೇ ಸೆಮಿಸ್ಟರ್‌ಗಳ ತರಗತಿಗಳನ್ನು 2023–24ನೇ ಶೈಕ್ಷಣಿಕ ಸಾಲಿನ 2, 4 ಮತ್ತು 6 ನೇ ಸೆಮಿಸ್ಟರ್‌ಗಳ ಪರೀಕ್ಷಾ ಮುಗಿದ ನಂತರ ಪ್ರಾರಂಭಿಸಬಹುದಾಗಿರುತ್ತದೆ. ಕೋವಿಡ್–19 ದಿಂದ ಶೈಕ್ಷಣಿಕ ವೇಳಾಪಟ್ಟಿಯು ನಿಗದಿತ ಸಮಯಕ್ಕಿಂತ ಮುಂದೂಡಿ ಕಾರ್ಯನಿರ್ವಹಿಸುತ್ತಿರುವದರಿಂದ ಹಾಗೂ ಪರೀಕ್ಷಾ ದಿನಾಂಕವು ಮುಂದೂಡಲ್ಪಟ್ಟಿದ್ದರಿಂದ 3 ಮತ್ತು 5 ನೇ ಸೆಮಿಸ್ಟರ್‌ಗಳ ತರಗತಿಗಳನ್ನು ನಡೆಸಬೇಕಾಗಿರುತ್ತದೆ. ಆದ್ದರಿಂದ 50% ಪ್ರತಿಶತ: ತರಗತಿಗಳನ್ನು ಆಫ್‌ಲೈನ ಮುಖಾಂತರ ಹಾಗೂ ಉಳಿದ 50% ಪ್ರತಿಶತ: ತರಗತಿಗಳನ್ನು ಆನ್‌ಲೈನ್ ಮೂಲಕ ಹಾಗೂ ವಿಶೇಷ ತರಗತಿಗಳನ್ನು ಹಾಗೂ ಹೆಚ್ಚುವರಿ ತರಗತಿಗಳನ್ನು ಕೈಗೊಳ್ಳುವುದರ ಮೂಲಕ ಹಾಗೂ ಹಾಜರಾತಿಯನ್ನು ಆಫ್‌ಲೈನ್ ಮತ್ತು ಆನ್‌ಲೈನ್ ಎರಡರಲ್ಲೂ ಪಡೆದು ಕ್ರೋಢೀಕರಿಸಿ 75% ಹಾಜರಾತಿಯನ್ನು ಪಡೆದು 2024–25ನೇ ಶೈಕ್ಷಣಿಕ ಸೆಮಿಸ್ಟರ್‌ಗಳನ್ನು ಪೂರ್ಣಗೊಳಿಸಲು ಹಾಗೂ 50:50 ಅನುಪಾತದಲ್ಲಿ 2024–25ನೇ ಶೈಕ್ಷಣಿಕ ವೇಳಾಪಟ್ಟಿಯನ್ನು ತಯಾರಿಸಲು ಸಭೆಯ ಅನುಮೋದನೆ ಕೋರಲಾಯಿತು.** **ಸದಸ್ಯರಾದ ಪ್ರೊ. ಬಿ. ಜಿ. ಹೆಗಡೆ ಇವರು ಕೋವಿಡ್–19 ನಂತರ ದೇಶದ ಐ.ಐ.ಟಿ ಗಳಲ್ಲಿ Hybrid Mode ಮಾದರಿಯನ್ನು ಅನುಸರಿಸಿ ಮಹಾವಿದ್ಯಾಲಯಗಳಲ್ಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಸರಿಪಡಿಸಲಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ಎಲ್ಲ ಸದಸ್ಯರು ಒಪ್ಪಿಗೆ ಸೂಚಿಸಿದ ನಂತರ, 2024–25 ನೇ ಶೈಕ್ಷಣಿಕ ಸಾಲಿನಲ್ಲಿ 3 ಮತ್ತು 5 ನೇ ಸೆಮಿಸ್ಟರ್‌ಗಳ ತರಗತಿಗಳನ್ನು 50:50 ಅನುಪಾತದಲ್ಲಿ (Hybrid Mode) ನಡೆಸಲು ಅನುಮೋದನೆ ನೀಡಿತು.**
3	2024/09/03	ಬಿ.ಎ. ಕೋರ್ಸಿಗೆ ನಿಗದಿಪಡಿಸಲಾದ ಶುಲ್ಕವನ್ನು ಬಿ.ಎಸ್.ಡಬ್ಲೂ. ಕೋರ್ಸಿಗೆ ನಿಗದಿಪಡಿಸುವ ಕುರಿತು.
ತೀರ್ಮಾನ		**2024–25ನೇ ಶೈಕ್ಷಣಿಕ ಸಾಲಿನಿಂದ ಬಿ.ಎ. ಕೋರ್ಸಿಗೆ ನಿಗದಿಪಡಿಸಲಾದ ಶುಲ್ಕವನ್ನು ಬಿ.ಎಸ್.ಡಬ್ಲೂ. ಕೋರ್ಸಿಗೆ ನಿಗದಿಪಡಿಸಲು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.**
4	2024/09/04	ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಮತ್ತು ದೈಹಿಕ ಶಿಕ್ಷಕರ ವಿವರವನ್ನು ನೀಡದೆ ಇರುವ ಮಹಾವಿದ್ಯಾಲಯಗಳ ಮೇಲೆ ಕ್ರಮ ಕೈಗೊಳ್ಳುವ ಕುರಿತು.
ತೀರ್ಮಾನ		**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಯ ಸಂಯೋಜಿತ ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳಲ್ಲಿನ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಕರುಗಳ ವಿವರವನ್ನು ಗೂಗಲ್–ಲಿಂಕನಲ್ಲಿ ದಿನಾಂಕ: 05.08.2024 ರ ಒಳಗೆ ಸಲ್ಲಿಸಲು ಸುತ್ತೋಲೆ ಹೊರಡಿಸಲಾಗಿತ್ತು. ಇದರಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ 351 ಮಹಾವಿದ್ಯಾಲಯಗಳಲ್ಲಿ ಗ್ರಂಥಪಾಲಕರ ಮಾಹಿತಿಯನ್ನು 97 ಮಹಾವಿದ್ಯಾಲಯದವರು ಮತ್ತು ದೈಹಿಕ ಶಿಕ್ಷಕರ ಮಾಹಿತಿಯನ್ನು 101 ಮಹಾವಿದ್ಯಾಲಯದವರು ಮಾತ್ರ ಸಲ್ಲಿಸಿರುತ್ತಾರೆ. ಮಾಹಿತಿಯನ್ನು ಸಲ್ಲಿಸದೇ ಇರುವ ಮಹಾವಿದ್ಯಾಲಯಗಳ ಮೇಲೆ ಕ್ರಮ ಕೈಗೊಳ್ಳುವ ಕುರಿತು ಸಭೆಯ ಮಾರ್ಗದರ್ಶನ ಕೋರಲಾಯಿತು. ಚರ್ಚಿಸಿದ ಸಭೆಯು, ಈ ವಿಷಯದ ಕುರಿತಾಗಿ ಮಹಾವಿದ್ಯಾಲಯಗಳಿಗೆ ಸುತ್ತೋಲೆ ಹೊರಡಿಸಿ 15 ದಿನಗಳ ಒಳಗಾಗಿ ಮಾಹಿತಿಯನ್ನು ತರಿಸಿಕೊಳ್ಳಲು ಹಾಗೂ ಸಿ.ಡಿ.ಸಿ. ವಿಭಾಗದಿಂದ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಿತು.**

<table>
<tr><td>05</td><td>2024/09/05</td><td>ರಾಣಿ ಚನ್ನಮ್ಮ ಮಹಾವಿದ್ಯಾಲಯಯದ ಅಧೀನದಲ್ಲಿ ಬರುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಬಿ.ಎಸ್ಸಿ. ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಹಾಗೂ ಬಿ.ಸಿ.ಎ. ಕೋರ್ಸ್‌ಗೆ ಹೆಚ್ಚುವರಿ ಪ್ರವೇಶಾತಿ ನೀಡುವ ಕುರಿತು.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ಮಹಾವಿದ್ಯಾಲಯದ ಅಧೀನದಲ್ಲಿ ಬರುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ 2024–25 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಬಿ.ಎಸ್ಸಿ. ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಕೋರ್ಸ್‌ನ ಪ್ರವೇಶ ಮಿತಿ 40 ಹಾಗೂ ಬಿ.ಸಿ.ಎ. ಕೋರ್ಸ್‌ನ ಮಿತಿ 100 ಇರುತ್ತದೆ. ಮುಂದುವರೆದು, ಸದರಿ ಕೋರ್ಸುಗಳಿಗೆ 40 ಹಾಗೂ 100 ವಿದ್ಯಾರ್ಥಿಗಳು ಈಗಾಗಲೇ ಪ್ರವೇಶ ಪಡೆದಿರುತ್ತಾರೆ.
ಸದರಿ ಕೋರ್ಸುಗಳ ಪ್ರವೇಶಕ್ಕಾಗಿ ಅತಿ ಹೆಚ್ಚು ಬೇಡಿಕೆ ಇರುವುದು ಕಂಡು ಬಂದಿದೆ. ಆದ್ದರಿಂದ ಈ ಕೆಳಕಾಣಿಸಿದಂತೆ ಸದರಿ ಕೋರ್ಸುಗಳಿಗೆ ಪ್ರವೇಶ ಮಿತಿ ಹೆಚ್ಚಿಸಿ ಪ್ರವೇಶವನ್ನು ಪಡೆಯಲಾಗಿದೆ.
<table>
<tr><th>SL NO</th><th>Courses</th><th>Subject</th><th>Intake</th></tr>
<tr><td rowspan="2">1</td><td rowspan="2">B. Sc Criminology and Forensic Science</td><td>Zoology</td><td>10</td></tr>
<tr><td>Geo-informatics</td><td>10</td></tr>
<tr><td>2</td><td>BCA</td><td></td><td>10</td></tr>
</table>
2024–25 ನೇ ಶೈಕ್ಷಣಿಕ ಸಾಲಿಗೆ ಬಿ.ಎಸ್ಸಿ. ಕೋರ್ಸಿಗೆ ರೂ. 6,700/– ಮತ್ತು ಬಿ.ಸಿ.ಎ ಕೋರ್ಸಿಗೆ ರೂ. 35,980/–ರಂತೆ ಪ್ರವೇಶ ಶುಲ್ಕವಿದ್ದು, ಹೆಚ್ಚುವರಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ರೂ.10,000/–ಶುಲ್ಕದೊಂದಿಗೆ ಪ್ರವೇಶಾತಿ ನೀಡಲಾಗಿದೆ. ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.</td></tr>
<tr><td>6</td><td>2024/09/06</td><td>ಸ್ನಾತಕೋತ್ತರ ಆಡಳಿತ ನಿರ್ವಹಣಾ ಅಧ್ಯಯನ ವಿಭಾಗದ ಅಭ್ಯಾಸ ಮಂಡಳಿಯ ಸಭೆಯ ನಿರ್ಣಯವನ್ನು ಅನುಮೋದಿಸುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಸ್ನಾತಕೋತ್ತರ ಆಡಳಿತ ನಿರ್ವಹಣಾ ಅಧ್ಯಯನ ವಿಭಾಗದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪಠ್ಯಕ್ರಮದಲ್ಲಿ 3ನೇ ಸೆಮಿಸ್ಟರ್‌ನ Skill Development ಪ್ರಶ್ನೆ ಪತ್ರಿಕೆಗೆ ಸಂಬಂಧಪಟ್ಟಂತೆ ಗ್ರೇಡ್ ನೀಡುವಿಕೆ, ಅಂಕಗಳ ನಿಗದಿ, ಫಲಿತಾಂಶ ನೀಡುವಿಕೆ ಹಾಗೂ ಇತರೆ ವಿಷಯಗಳ ಕುರಿತು ದಿನಾಂಕ: 19.07.2024 ರಂದು ಜರುಗಿದ ಅಭ್ಯಾಸ ಮಂಡಳಿಯ ಸಲ್ಲಿಸಿದ ನಡಾವಳಿಗಳನ್ನು ಪರಿಶೀಲಿಸಿ ವಿದ್ಯಾವಿಷಯಕ್ ಪರಿಷತ್ತಿನ ಸಭೆಯು ಅನುಮೋದನೆ ನೀಡಿತು.</td></tr>
<tr><td>7</td><td>2024/09/07</td><td>ರಾಷ್ಟ್ರೀಯ ಶಿಕ್ಷಣ ನೀತಿ–2020 ವಿನಿಯಮ ಪರಿಶೀಲನಾ ಸಭೆಯ ನಡಾವಳಿ ಕುರಿತು.</td></tr>
<tr><td colspan="2">ತೀರ್ಮಾನ</td><td>ದಿನಾಂಕ: 08.08.2024 ರಂದು ಜರುಗಿದ ರಾಷ್ಟ್ರೀಯ ಶಿಕ್ಷಣ ನೀತಿ–2020 ರ ವಿನಿಯಮ ಪರಿಶೀಲನಾ ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.</td></tr>
<tr><td>8</td><td>2024/09/08</td><td>ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಭ್ಯಾಸ ಮಂಡಳಿಯ ನಿರ್ಣಯವನ್ನು ಅನುಮೋದಿಸುವ ಕುರಿತು.</td></tr>
<tr><td colspan="2">ತೀರ್ಮಾನ</td><td>ದಿನಾಂಕ: 18.07.2024 ರಂದು ಜರುಗಿದ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಭ್ಯಾಸ ಮಂಡಳಿ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯ ಅನುಮೋದನೆಗೆ / ಮಂಡಿಸಲಾಯಿತು. ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಹೊಸ ಪಠ್ಯಕ್ರಮ ರಚನೆಗೆ ಸಭೆಯು ಅನುಮೋದನೆ ನೀಡಿತು.
ಮುಂದುವರೆದು, ಡಾ. ಭವಾನಿಶಂಕರ, ಉಪ ಗ್ರಂಥಪಾಲಕರು ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಯುಜಿಸಿ ನಿಯಮಾವಳಿಯಂತೆ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಯಲ್ಲಿ ಅಗತ್ಯ ತಿದ್ದುಪಡಿ ಮಾಡಲು ಸೂಚಿಸಿತು.</td></tr>
</table>

9	2024/09/09	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಎಂ.ಬಿ.ಎ ಪದವಿಗೆ ಪ್ರವೇಶ ಪಡೆದು ಶೇಕಡಾ 75% ಹಾಜರಾತಿ ಪೂರೈಸದೆ ಇರುವ ವಿದ್ಯಾರ್ಥಿಗಳಿಗೆ ಮುಂದಿನ ಸೆಮಿಸ್ಟರ್‌ಗೆ ಪ್ರವೇಶ ನೀಡುವ ಕುರಿತು.
ತೀರ್ಮಾನ		**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಎಂ.ಬಿ.ಎ. ಪದವಿಗೆ ಪ್ರವೇಶ ಪಡೆದು ಸೆಮಿಸ್ಟರಿನ ಕೆಲವು ವಿಷಯಗಳಲ್ಲಿ ಶೇಕಡಾ 75% ಹಾಜರಾತಿಯನ್ನು ಪೂರೈಸದೆ ಇರುವ ವಿದ್ಯಾರ್ಥಿಗಳಿಗೆ ಮುಂದಿನ ತರಗತಿ/ಸೆಮಿಸ್ಟರ್‌ಗಳಿಗೆ ಪ್ರವೇಶ ಮುಂದುವರೆಸುವ(Study Continuation) ಕುರಿತು ವಿಶ್ವವಿದ್ಯಾಲಯದ ನಿಯಮಾವಳಿಗಳಲ್ಲಿ ಯಾವುದೇ ನಿಯಮವಿಲ್ಲದ ಕಾರಣ ಸಭೆಯ ಸೂಕ್ತ ನಿರ್ದೇಶನ ಕೋರಲಾಯಿತು. ಸದರಿ ವಿಷಯವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ನಿಗದಿತ ದಂಡ ವಿಧಿಸಿ ಹಾಜರಾತಿಯಲ್ಲಿ 70% ರ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಮಾತ್ರ ಮುಂದಿನ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಅವಕಾಶ ನೀಡಲು ಸಭೆಯು ತೀರ್ಮಾನಿಸಿತು.**
10	2024/09/10	2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಯ ಪೂರ್ವಭಾವಿ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯ ಅನುಮೋದನೆ ಕುರಿತು.
ತೀರ್ಮಾನ		**ದಿನಾಂಕ: 29.08.2024 ರಂದು ಜರುಗಿದ 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಯ ಪೂರ್ವಭಾವಿ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.**
11	2024/09/11	ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದ "ಪ್ರವೇಶ ಶುಲ್ಕ ಪರಿಷ್ಕರಣಾ ಹಾಗೂ ಏಕರೂಪದ ಪರೀಕ್ಷಾ ಸಂಭಾವನೆ" ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.
ತೀರ್ಮಾನ		**ದಿನಾಂಕ: 10.09.2024 ರಂದು ಜರುಗಿದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದ "ಪ್ರವೇಶ ಶುಲ್ಕ ಪರಿಷ್ಕರಣಾ ಹಾಗೂ ಏಕರೂಪದ ಪರೀಕ್ಷಾ ಸಂಭಾವನೆ" ಸಮಿತಿ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಿತು.**
12	2024/09/12	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಸ್ನಾತಕೋತ್ತರ ವಿಷಯಗಳಲ್ಲಿ ತುರ್ತು ಕಾರಣಗಳಿಂದ 75% ರಷ್ಟು ಹಾಜರಾತಿಯನ್ನು ಪೂರೈಸದೇ ಇರುವ ವಿದ್ಯಾರ್ಥಿಗಳಿಗೆ ಮರು ನೋಂದಣಿ ಮೂಲಕ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವ ಕುರಿತು.
ತೀರ್ಮಾನ		**75% ರಷ್ಟು ಹಾಜರಾತಿ ಕೊರತೆಯಿಂದ ಪರೀಕ್ಷೆಗೆ ಹಾಜರಾಗದ ಕೆಲ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ವಿದ್ಯಾರ್ಥಿಗಳಿಗೆ ಮರು ನೋಂದಣಿ ಪಡೆದು ಓ. ಇ. ಸಿ. ವಿಷಯಗಳಿಗೆ 75% ರಷ್ಟು ಹಾಜರಾತಿಯನ್ನು ಪೂರೈಸುವ ಷರತ್ತಿನೊಂದಿಗೆ ಹಾಗೂ ಪ್ರತಿ ವಿಷಯಕ್ಕೆ ರೂ.3000/–ಗಳ ದಂಡ ಶುಲ್ಕವನ್ನು ವಿಧಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗುವಂತೆ ಅನುಮತಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆಯನ್ನು ನೀಡಿತು.**
13	2024/09/13	2024–25 ನೇ ಶೈಕ್ಷಣಿಕ ಸಾಲಿನಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮರಾಠಿ ವಿಭಾಗವನ್ನು ಎಸ್.ಕೆ.ಇ. ಸಂಸ್ಥೆ ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿಗೆ ಸ್ಥಳಾಂತರಿಸುವ ಕುರಿತು.

	ತೀರ್ಮಾನ	ದಿನಾಂಕ: 29.08.2024 ರಂದು ಜರುಗಿದ ವಿಭಾಗೀಯ ಪರಿಷತ್ ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಲಾಯಿತು. ಪರಿಶೀಲಿಸಿದ ಸಭೆಯು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದ ಮರಾಠಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದರಿಂದ 2024–25ನೇ ಶೈಕ್ಷಣಿಕ ಸಾಲಿನಿಂದ ಮರಾಠಿ ವಿಭಾಗವನ್ನು ಎಸ್.ಕೆ.ಇ. ಸಂಸ್ಥೆ ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿಗೆ ಸ್ಥಳಾಂತರಿಸುವ ಶಿಫಾರಸ್ಸಿಗೆ ಅನುಮೋದನೆ ನೀಡಿತು.
14	2024/09/14	ವಿಜಯಪುರ ಸ್ನಾತಕೋತ್ತರ ಕೇಂದ್ರದಲ್ಲಿ ನಡೆಯುತ್ತಿರುವ ಇತಿಹಾಸ ವಿಭಾಗವನ್ನು ಕಿತ್ತೂರಿಗೆ ಸ್ಥಳಾಂತರಿಸುವ ಕುರಿತು
	ತೀರ್ಮಾನ	ಮೊಹಮ್ಮದ ರೋಷನ್, ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಪತ್ರ ದಿನಾಂಕ: 09.09.2024 ರಲ್ಲಿ ವಿಜಯಪುರ ಸ್ನಾತಕೋತ್ತರ ಕೇಂದ್ರದಲ್ಲಿ ನಡೆಯುತ್ತಿರುವ ಇತಿಹಾಸ ವಿಭಾಗವನ್ನು ಕಿತ್ತೂರಿಗೆ ಸ್ಥಳಾಂತರಿಸಲು ತಿಳಿಸಿರುವ ವಿಷಯವನ್ನು ಸಭೆಗೆ ವಿವರಿಸಲಾಯಿತು. ಮೂಲಸೌಕರ್ಯದ (Infrastructure) ಕೊರತೆಯಿಂದ ಈ ವಿಷಯವನ್ನು ಕೈಬಿಡಲಾಯಿತು.
15	2024/09/15	2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ನೂತನ ಪಠ್ಯಕ್ರಮವನ್ನು (ಸಿ.ಬಿ.ಸಿ.ಎಸ್) ಅನುಮೋದಿಸುವ ಕುರಿತು.
	ತೀರ್ಮಾನ	2024–25ನೇ ಶೈಕ್ಷಣಿಕ ಸಾಲಿನಲ್ಲಿ ಜಾರಿಗೊಳಿಸಬೇಕಾದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಭ್ಯಾಸ ಮಂಡಳಿಯಿಂದ ಹೊಸದಾಗಿ ರಚಿಸಲ್ಪಟ್ಟ ಸ್ನಾತಕೋತ್ತರ ಪಠ್ಯಕ್ರಮಗಳನ್ನು(ಸಿ.ಬಿ.ಸಿ.ಎಸ್) ಪರಿಶೀಲಿಸಿ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.
16	2024/09/16	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರನ್ನು 'ಕಿತ್ತೂರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ' ಎಂದು ಹೆಸರು ಬದಲಾವಣೆ ಮಾಡುವ ಬಗ್ಗೆ ಮಾನ್ಯ ಜಿಲ್ಲಾ ಅಧಿಕಾರಿಗಳು ಸಲ್ಲಿಸಿರುವ ಪತ್ರದ ಕುರಿತು.
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರನ್ನು 'ಕಿತ್ತೂರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ' ಎಂದು ಹೆಸರು ಬದಲಾವಣೆ ಮಾಡುವ ಬಗ್ಗೆ ಮಾನ್ಯ ಜಿಲ್ಲಾ ಅಧಿಕಾರಿಗಳು ಸಲ್ಲಿಸಿರುವ ಪತ್ರದ ಕುರಿತು ಚರ್ಚಿಸಿದ ಸಭೆಯು, ರಾಣಿ ಚನ್ನಮ್ಮನ ಕೀರ್ತಿಯು ಕಿತ್ತೂರಿಗೆ ಮಾತ್ರ ಸೀಮೀತವಾದುದ್ದಲ್ಲ ಇಡೀ ದೇಶದ ಹೆಮ್ಮೆ ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಹೆಸರನ್ನು ಯಥಾವತ್ತಾಗಿ ಮುಂದುವರೆಸಲು ತೀರ್ಮಾನಿಸಿತು.
17	2024/09/17	2023–24ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಲು ವಾರ್ಷಿಕ ಲೆಕ್ಕಪತ್ರವನ್ನು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಳಗಾವಿ ಇವರಿಗೆ ಸಲ್ಲಿಸುವ ಕುರಿತು
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2023–24ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಲು ವಾರ್ಷಿಕ ಲೆಕ್ಕಪತ್ರವನ್ನು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಳಗಾವಿ ಇವರಿಗೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.
18	2024/09/18	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2010 ರಿಂದ 2021 ರ ರವರೆಗೆ ಪ್ರವೇಶ ಪಡೆದು ನಿಗದಿತ ಅವಧಿಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ ಪರೀಕ್ಷೆಗಳನ್ನು ಜರುಗಿಸುವ ಕುರಿತು.

	ತೀರ್ಮಾನ	2010 ರಿಂದ 2019 ರವರೆಗಿನ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡು ನಿಗದಿತ ಅವಧಿಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸದೇ ಇರುವ ಅನೇಕ ವಿದ್ಯಾರ್ಥಿಗಳು ಇನ್ನೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ದಶಮಾನೋತ್ಸವದ ಪ್ರಯುಕ್ತವಾಗಿ, ಸದರಿ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ(ಗೋಲ್ಡನ್ ಚಾನ್ಸ್) ಪರೀಕ್ಷೆಗಳನ್ನು ನವೆಂಬರ್-2021 ರಲ್ಲಿ ಜರುಗಿಸಲಾಗಿತ್ತು. ಸದರಿ ಪರೀಕ್ಷೆಯಲ್ಲಿ 3788 ವಿದ್ಯಾರ್ಥಿಗಳು ಹಾಜರಾಗಿದ್ದು, 2793 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸಿ.ಬಿ.ಸಿ.ಎಸ್ ಮತ್ತು ನಾನ್ ಸಿ.ಬಿ.ಸಿ.ಎಸ್ ಪಠ್ಯಕ್ರಮಗಳ ಬೋಧನೆ ಅಂತ್ಯವಾಗಿದ್ದು, ಎನ್.ಇ.ಪಿ. ಪಠ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಹೀಗಾಗಿ ನಿಗದಿತ ಅವಧಿಯಲ್ಲಿ ಪದವಿ ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಗೋಲ್ಡನ್ ಚಾನ್ಸ್ ಪರೀಕ್ಷೆಗಳನ್ನು ನಡೆಸಲು ಕುಲಸಚಿವರು(ಮೌಲ್ಯಮಾಪನ) ಸಭೆಗೆ ಕೋರಿದ ಹಿನ್ನೆಲೆಯಲ್ಲಿ, 2010 ರಿಂದ 2021 ರಲ್ಲಿ ವಿವಿಧ ಪದವಿಗಳಿಗೆ ಪ್ರವೇಶ ಪಡೆದು ನಿಗದಿತ ಕೋರ್ಸ ಅವಧಿಗಳಲ್ಲಿ ಪದವಿಗಳನ್ನುಪೂರ್ಣಗೊಳಿಸದೇ ಇರುವ ಅಂದಾಜು 72000 ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ ಪರೀಕ್ಷೆಗಳನ್ನು ನಡೆಸಲು ಸಭೆಯು ಅನುಮೋದನೆ ನೀಡಿತು ಹಾಗೂ ಇದಕ್ಕೆ ಸಂಬಂಧಿಸಿದ ಮಾನದಂಡ ಮತ್ತು ನಿಯಮಾವಳಿಗಳನ್ನು ರೂಪಿಸಲು ಅನುಮತಿ ನೀಡಿತು.
19	2024/09/19	ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಾದ ಪರೀಕ್ಷಾ ಮೇಲ್ವಿಚಾರಣೆ, ಬಾಹ್ಯ ಅಧೀಕ್ಷಕರ ಕಾರ್ಯ, ವಿಚಕ್ಷಕ ದಳ ಹಾಗೂ ಮೌಲ್ಯಮಾಪನ ಕಾರ್ಯಗಳಲಾಗುತ್ತಿರುವ ಹಿನ್ನಡೆಗಳ ಕುರಿತು.
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಪರೀಕ್ಷೆಗಳಿಗೆ ಸಂಬಂಧಿಸಿ, ಪ್ರತಿ ಸೆಮಿಸ್ಟರ್‌ನಲ್ಲಿ ಅಂದಾಜು 1.60 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಾರೆ. ಪರೀಕ್ಷಾ ಕಾರ್ಯಗಳನ್ನು ಸುಗಮವಾಗಿ ಜರುಗಿಸಲು ಪರೀಕ್ಷಾ ಕೇಂದ್ರಗಳಿಗೆ ಅವಶ್ಯವಿರುವ ಕೋಠಡಿ ಮೇಲ್ವಿಚಾರಕರು, ಬಾಹ್ಯ ಉಪಧೀಕ್ಷಕಕರು, ವಿಚಕ್ಷಕ ದಳಗಳನ್ನು ನಿಯೋಜಿಸಲಾಗುತ್ತದೆ. ಹಾಗೂ ಈ ಕಾರ್ಯವು 02 ತಿಂಗಳುಗಳ ಕಾಲ ಜರುಗುತ್ತದೆ. ಸರಿಯಾದ ಸಮಯಕ್ಕೆ ಅಧ್ಯಾಪಕರುಗಳ ಲಭ್ಯತೆ, ಸಿಬ್ಬಂದಿಗಳಿಗೆ ವಿಶೇಷ ಸಾಂದರ್ಭಿಕ ರಜೆಗಳ ಕೊರತೆ ಹಾಗೂ ಇನ್ನೀತರ ಸಮಸ್ಯೆಗಳ ಕುರಿತು ಹಂತ-ಹಂತವಾಗಿ ಕುಲಸಚಿವರು(ಮೌಲ್ಯಮಾಪನ) ಸಭೆಯಲ್ಲಿ ವಿವರಿಸಿದರು. ಚರ್ಚಿಸಿದ ಸಭೆಯು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೇಗನೆ ಪರೀಕ್ಷಾ ಫಲಿಂತಾಶ ಪ್ರಕಟಿಸಬೇಕಾದ ಹಿನ್ನೆಲೆಯಲ್ಲಿ ಪದವಿ ಮಹಾವಿದ್ಯಾಲಯಗಳ ಅಧ್ಯಾಪಕರುಗಳಿಗೆ(Non-UGC) ವಿಶೇಷ ಸಾಂದರ್ಭಿಕ ರಜೆವನ್ನು 20 ದಿನಗಳವರೆಗೆ ನಿಗದಿಪಡಿಸಲು Commisioner, Collegeate Education, Bangalore ಇವರಿಗೆ ಶಿಫಾರಸ್ಸು ಪತ್ರ ಬರೆಯಲು ತೀರ್ಮಾನಿಸಿತು ಹಾಗೂ ಮಹಾವಿದ್ಯಾಲಯದ ಪ್ರಾಂಶುಪಾಲರು ಪರೀಕ್ಷಾ ಕಾರ್ಯಗಳಿಗೆ ಹಾಜರಾಗುವ ಬೋಧಕ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ, "RCU Smart Card" ಮಾಡಿ ಅದರಲ್ಲಿ ವಿಶ್ವವಿದ್ಯಾಲಯ ಮತ್ತು ಎಲ್ಲ ಮಹಾವಿದ್ಯಾಲಯಗಳ ಸಿಬ್ಬಂದಿಗಳ(ಬೋಧಕ ಮತ್ತು ಬೋಧಕೇತರ) ಸೇವಾ ವಿವರದ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಿತು.
		ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು
1	2024/03/1	ಮಹಿಳಾ ಅಧ್ಯಯನ ವಿಷಯವನ್ನು ವಿಶ್ವವಿದ್ಯಾಲಯದಲ್ಲಿ ಮತ್ತು ಅದರಡಿ ಬರುವ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ UUCMS ತಂತ್ರಾಂಶದಲ್ಲಿ ಸೇರಿಸುವ ಕುರಿತು.
	ತೀರ್ಮಾನ	ಮಹಿಳಾ ಅಧ್ಯಯನದ ಪದವೀಧರರು ಮಹಿಳಾ ಅಧ್ಯಯನ ವಿಷಯವನ್ನು ವಿಶ್ವವಿದ್ಯಾಲಯದಲ್ಲಿ ಮತ್ತು ಅದರಡಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಹಾಗೂ UUCMS ತಂತ್ರಾಂಶದಲ್ಲಿ ಸೇರಿಸುವ ಮನವಿ ಕುರಿತು ಚರ್ಚಿಸಿದ ಸಭೆಯು ಸ್ನಾತಕ ಸಮಾಜಶಾಸ್ತ್ರ ಮತ್ತು ಓ.ಇ.ಸಿ. ನಲ್ಲಿ ಸೇರಿಸಲು ಸಭೆಯು ತೀರ್ಮಾನಿಸಿತು.

II	2024/03/ II	ಕೇಂದ್ರಿಯ ಮೌಲ್ಯಮಾಪನ ಅರ್ಥಶಾಸ್ತ್ರ ವಿಭಾಗ, ರಾಚ.ವಿ. ಬೆಳಗಾವಿ ಇವರು ಪರೀಕ್ಷಾ ಮೌಲ್ಯಮಾಪನ ಕಾರ್ಯಗಳನ್ನು ಸ್ಥಗಿತಗೊಳಿಸಲು ಸಲ್ಲಿಸಿರುವ ಮನವಿಯ ಕುರಿತು.

ತೀರ್ಮಾನ

ಮೌಲ್ಯಮಾಪಕರು, ಕೇಂದ್ರಿಯ ಮೌಲ್ಯಮಾಪನ, ಅರ್ಥಶಾಸ್ತ್ರ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಅರ್ಥಶಾಸ್ತ್ರ ವಿಷಯವನ್ನು ಸ್ನಾತಕ ಪ್ರಥಮ ವರ್ಷದ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಪ್ರಾರಂಭಿಸಲು ಹಾಗೂ ಕಾರ್ಯಭಾರವನ್ನು ಸರಿದೂಗಿಸಲು ವಿಶ್ವವಿದ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಬೋಧಕ ಸಿಬ್ಬಂದಿಗಳು ಮೌಲ್ಯಮಾಪನ ಕಾರ್ಯವನ್ನು ಸ್ಥಗಿತಗೊಳಿಸಿದ್ದು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ಸಮಸ್ಯೆಗೆ ಅತೀ ತುರ್ತಾಗಿ ಪರಿಹಾರ ಒದಗಿಸುವುದು ಅವಶ್ಯವಿರುತ್ತದೆ. ಕಾರಣ ಈ ವಿಷಯದ ಕುರಿತಾಗಿ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ದೇಶನವನ್ನು ಮಾನ್ಯ ಕುಲಪತಿಗಳು ಕೋರಿದ ಹಿನ್ನೆಲೆಯಲ್ಲಿ, ಸದಸ್ಯರುಗಳು ಈ ಕೆಳಕಾಣಿಸಿದಂತೆ ತಮ್ಮ ಅಭಿಪ್ರಾಯಗಳನ್ನು ನೀಡಿದರು.

ಪ್ರೊ. ಎಸ್. ಬಿ. ಆಕಾಶ, ಸದಸ್ಯರು ಮತ್ತು ಡೀನರು, ವಾಣಿಜ್ಯಶಾಸ್ತ್ರ ವಿಭಾಗ:

ಕೇಂದ್ರದ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ(ಯು.ಜಿ.ಸಿ) ಮತ್ತು ರಾಜ್ಯದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ಗಳ ನಿಯಮಾವಳಿಗಳನ್ನು ವಿಶ್ವವಿದ್ಯಾಲಯದಲ್ಲಿ ಪಾಲಿಸಲಾಗುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ–2000 ದಲ್ಲಿ ಅಭ್ಯಾಸ ಮಂಡಳಿ(ಬಿ.ಓ.ಸ್) ಯು ವಿಶ್ವವಿದ್ಯಾಲಯದ ಕೋರ್ಸ್ ಪ್ರಾರಂಭ, ಪಠ್ಯಕ್ರಮದ ಕುರಿತಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಕಾರಣ, ಅಭ್ಯಾಸ ಮಂಡಳಿಯ ನಿರ್ಣಯವು ಸರ್ವೋಚ್ಚವಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಈ ಹಿಂದೆ 2012 ರಲ್ಲಿ ಪ್ರೊ. ಬಿಸಲಯ್ಯ ಇವರ ಅಧ್ಯಕ್ಷತೆಯದಲ್ಲಿ ರಚಿಸಲಾದ ಸಮಿತಿಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರವು ಕೂಡ ಅಭ್ಯಾಸ ಮಂಡಳಿ(ಬಿ.ಓ.ಎಸ್) ಯ ನಿರ್ಣಯ ಅಂತಿಮವಾಗಿರುತ್ತದೆ ಎಂದು ತಿಳಿಸಿರುತ್ತದೆ. ಅಲ್ಲದೇ, ಪ್ರತಿ ವರ್ಷ ಅಂದಾಜು 1000 ವಾಣಿಜ್ಯ ವಿದ್ಯಾರ್ಥಿಗಳು ಪದವಿ ಪಡೆದು ತೇರ್ಗಡೆ ಹೊಂದುತ್ತಾರೆ. ಪ್ರಸ್ತುತ ಸ್ನಾತಕ ವಾಣಿಜ್ಯ ವಿಭಾಗದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಸೇರಿಸುವುದರಿಂದ ವಾಣಿಜ್ಯಶಾಸ್ತ್ರ ವಿಷಯದ ಪದವೀದರರಲ್ಲಿ ನಿರುದ್ಯೋಗ ಸಮಸ್ಯೆ ಉಂಟಾಗುತ್ತದೆ ಎಂದು ತಿಳಿಸಿ ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಪದವಿ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ವಾಣಿಜ್ಯಶಾಸ್ತ್ರ ಬೋಧಕ ಸಿಬ್ಬಂದಿಗಳ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರು ಭರ್ತಿ ಮಾಡುವ ಸಂದರ್ಭದಲ್ಲಿ ವಾಣಿಜ್ಯ ವಿಷಯದ ಪಿ.ಎಚ್‌ಡಿ ಪದವಿ ಪಡೆದ ಅಭ್ಯರ್ಥಿಗಳನ್ನೆ ಆಯ್ಕೆ ಮಾಡಲಾಗುತ್ತದೆ ಹೊರತು ಅರ್ಥಶಾಸ್ತ್ರ ಅಭ್ಯರ್ಥಿಗಳನ್ನಲ್ಲ. ಕಾರಣ, ವಾಣಿಜ್ಯಶಾಸ್ತ್ರ ವಿಷಯದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಪ್ರಾರಂಭಿಸುವುದು ಸೂಕ್ತ ಅಲ್ಲ ಎಂದರು. ಈ ವಿಷಯವಾಗಿ ಸರ್ಕಾರಕ್ಕೆ ನಿರ್ದೇಶನ ಕೋರಲು ತಿಳಿಸಿದರು.

ಪ್ರೊ. ಡಿ. ಎನ್. ಪಾಟೀಲ್, ಸದಸ್ಯರು ಮತ್ತು ಡೀನರು, ಅರ್ಥಶಾಸ್ತ್ರ ವಿಭಾಗ:

ರಾಜ್ಯದ 04 ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಸ್ನಾತಕ ವಾಣಿಜ್ಯ ವಿಭಾಗದ ಪ್ರಥಮ ವರ್ಷದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಪ್ರಾರಂಭಿಸಲಾಗಿದೆ ಕಾರಣ, ಅದನ್ನೇ ಮಾದರಿಯಾಗಿಸಿ ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಕೂಡ ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗದ ಪ್ರಥಮ ವರ್ಷದ ಎರಡು ಸೆಮಿಸ್ಟರಗಳಲ್ಲಿ ಅರ್ಥಶಾಸ್ತ್ರ ವಿಷಯವನ್ನು ಪ್ರಾರಂಭಿಸಲು ವಿನಂತಿಸಿದರು. ವಾಣಿಜ್ಯಶಾಸ್ತ್ರ ವಿಷಯದ(ಪಿ.ಯು.ಸಿ. 1 ಮತ್ತು 2 ನೇ ವರ್ಷ) ಪ್ರಾರಂಭದ ದಿನಗಳಿಂದಲೂ ಅರ್ಥಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಕಲಿಸಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಪದವಿ ಮಹಾವಿದ್ಯಾಲಯಗಳಲ್ಲಿ ಸರ್ಕಾರದಿಂದ ಮಂಜೂರಾದ ಬೋಧಕ ಹುದ್ದೆಗಳಿರುತ್ತವೆ. ವಾಣಿಜ್ಯಶಾಸ್ತ್ರ ವಿಭಾಗದಲ್ಲಿನ ಅರ್ಥಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಅರ್ಥಶಾಸ್ತ್ರ ಸಿಬ್ಬಂದಿಗಳೇ ಬೋಧಿಸಬೇಕೆಂದು ಸರ್ಕಾರದ ಆದೇಶ ಕೂಡ ಇರುತ್ತದೆ. ಮುಂದುವರೆದು, ಮಹಾವಿದ್ಯಾಲಯಗಳಲ್ಲಿ ಅರ್ಥಶಾಸ್ತ್ರ ವಿಷಯಕ್ಕೆ ನೋಬೆಲ್ ಪ್ರಶಸ್ತಿ ಕೂಡ ದೊರೆತಿರುವುದರಿಂದ ವಿದ್ಯಾರ್ಥಿಗಳು ಈ ವಿಷಯವನ್ನು ಅಧ್ಯಯನ ಮಾಡುವುದು ಉತ್ತಮ ಎಂದರು.

ಪ್ರೊ. ಯು. ಎಂ. ಶಿವನಗೌಡರ:

ಈ ಹಿಂದೆ ಬಿ.ಎ ಮತ್ತು ಬಿ.ಕಾಂ ಕೋರ್ಸ್‌ಗಳಲ್ಲಿ ಅರ್ಥಶಾಸ್ತ್ರ ವಿಷಯವನ್ನು ಬೋಧನೆ ಮಾಡಲಾಗುತ್ತಿತ್ತು. ಅದನ್ನೇ ಮುಂದುವರೆಸಿ ಸ್ನಾತಕ ಬಿ.ಕಾಂ. ಮೊದಲನೇ ವರ್ಷಕ್ಕೆ ಅರ್ಥಶಾಸ್ತ್ರ ವಿಷಯವನ್ನು ಪ್ರಾರಂಭಿಸಲು ಸಲಹೆ ನೀಡಿದರು. ಇದರಿಂದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಲು ಸಹಕಾರಿಯಾಗುತ್ತದೆ ಹಾಗೂ ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯಗಳು ಬೆಳೆಯಲು ಸಹಾಯಕವಾಗುತ್ತವೆ ಎಂದರು.

		ಪ್ರೊ. ಶಿವಕುಮಾರ ಪರಾಂಡೆ: ಸ್ನಾತಕ ಬಿ.ಕಾಂ ಪದವಿಯಲ್ಲಿ ಅರ್ಥಶಾಸ್ತ್ರ ವಿಷಯವನ್ನು ಪರಿಚಯಿಸದಿದ್ದರೇ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ಅನ್ಯಾಯವಾಗುವುದು. ಅಲ್ಲದೇ, ಬಿ.ಕಾಂ ಪದವಿ ಹೊಂದಿದ ವಿದ್ಯಾರ್ಥಿಗಳಿಗೆ ಬಿ.ಇಡ್ ಅಧ್ಯಯನ ನಡೆಸಲು ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಚಾರ್ಟರ್ಟೆಡ್ ಅಕೌಂಟ್ಸ್ ಕೋರ್ಸ್‌ನಲ್ಲಿ ಸುಮಾರು 100 ಪ್ರಶ್ನೆ ಪತ್ರಿಕೆಗಳು ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿರುತ್ತವೆ. ಕಾರಣ, ಬಿ.ಕಾಂ. ಪ್ರಥಮ ವರ್ಷದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಪ್ರಾರಂಭಿಸುವುದರಿಂದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಲು ಅನುಕೂಲವಾಗುತ್ತದೆ ಎಂದರು. ವಿಶೇಷ ಆಹ್ವಾನಿತರಾಗಿ ಆಗಮಿಸಿದ ಮಹಾವಿದ್ಯಾಲಯಗಳ ಅಧ್ಯಾಪಕರುಗಳ ಹೇಳಿಕೆಗಳು: ಶ್ರೀ ಬಿ. ಎಸ್. ಕಾಂಬಳೆ, ಕೆ.ಎಲ್.ಇ. ಮಹಾವಿದ್ಯಾಲಯ, ಅಥಣಿ: 1960–70 ರಿಂದ CBCS & Non-CBCS ಒಳಗೊಂಡು ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಅರ್ಥಶಾಸ್ತ್ರವನ್ನು ಬೋಧಿಸಲಾಗುತ್ತಿತ್ತು. ಕಾರಣ, ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಅರ್ಥಶಾಸ್ತ್ರವನ್ನು Cognitive ವಿಷಯವಾಗಿ ಪ್ರಾರಂಭಿಸಲು ವಿನಂತಿಸಿದರು. ಈ ಕುರಿತಾಗಿ ವಾಣಿಜ್ಯಶಾಸ್ತ್ರ ವಿಭಾಗದ ಅರ್ಥಶಾಸ್ತ್ರ ವಿಷಯವನ್ನು ಬೋಧಿಸಲು ಅರ್ಥಶಾಸ್ತ್ರ ಅಧ್ಯಾಪಕರುಗಳಿಗೆ ಅರ್ಹತೆ ಇರುವುದಿಲ್ಲ ಎಂದು ಹಲವಾರು ಬಾರಿ ಆಪಾದಿಸಲಾಗಿದೆ. ಕಾರಣ, ಅರ್ಥಶಾಸ್ತ್ರ ಸಿಬ್ಬಂದಿಗಳು ಸಂಬಂಧಿಸಿದ Workshop ಗಳಲ್ಲಿ ಕೂಡ ಭಾಗವಹಿಸಲು ಸಿದ್ಧರಿದ್ದೇವೆ ಎಂದರು. ಹೆಚ್ಚುವರಿಯಾಗಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಲು ಮತ್ತು ಎಂ.ಎನ್.ಸಿ. ಕಂಪನಿಗಳಲ್ಲಿ ಉದ್ಯೋಗ ಪಡೆಯಲು ಅರ್ಥಶಾಸ್ತ್ರ ವಿಷಯ ಮಹತ್ವದ ಪಾತ್ರವಹಿಸುತ್ತದೆ ಎಂದರು. ಶ್ರೀಮತಿ ನಿರ್ಮಲಾ, ಮಿರ್ಜಿ ಮಹಾವಿದ್ಯಾಲಯ, ಬೆಳಗಾವಿ:– ವಾಣಿಜ್ಯಶಾಸ್ತ್ರ ವಿಭಾಗಗಳ ಅಧ್ಯಾಪಕರುಗಳ ಕಾರ್ಯಭಾರವು Non-CBSC ರಿಂದ NEP ವರೆಗೆ ಹಂತ–ಹಂತವಾಗಿ ಕಡಿಮೆಯಾಗುತ್ತಿದೆ. ಇದರಿಂದ ವಾಣಿಜ್ಯ ವಿಷಯದಲ್ಲಿ ಪರಿಣಿತ ಹೊಂದಿದ ಸಿಬ್ಬಂದಿಗಳಲ್ಲಿ ಉದ್ಯೋಗಾವಕಾಶದ ತೊಂದರೆಯಾಗುತ್ತದೆ. ಕಾರಣ, ವಾಣಿಜ್ಯಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ಪರಿಚಯಿಸಲು ಮನವಿ ಮಾಡಿದರು. ಕಲಾ, ಬಿ.ಬಿ.ಎ. ಕಂಪ್ಯೂಟರ ವಿಜ್ಞಾನ ವಿಭಾಗಗಳಲ್ಲಿ ವಾಣಿಜ್ಯ ವಿಷಯಗಳನ್ನು ಪ್ರಾರಂಭಿಸಲು ಕೋರಿದರು. ಸುದೀರ್ಘವಾಗಿ ಚರ್ಚಿಸಿದ ಸಭೆಯು, ಪ್ರಸಕ್ತ 2024–25 ನೇ ಸಾಲಿಗೆ ಮಾತ್ರ ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗದ ಮೊದಲನೇ ವರ್ಷ(1 ಮತ್ತು 2 ನೇ ಸೆಮಿಸ್ಟರ್)ದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಪ್ರಾರಂಭಿಸಲು ಸರ್ವಾನುಮತದಿಂದ ತೀರ್ಮಾನಿಸಿತು. ನಂತರದ ಶೈಕ್ಷಣಿಕ ಸಾಲಿನ ಕುರಿತಾಗಿ ವಿವರವಾದ ಪ್ರಸ್ತಾವಣೆಯೊಂದಿಗೆ ಮುಂದೆ ಕೈಗೊಳ್ಳಬಹುದಾದ ಕ್ರಮಕ್ಕೆ ಮಾರ್ಗದರ್ಶನ ಕೋರಿ ಮಾನ್ಯ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.
III	2024/03/ III	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ ಬಿ.ಇಡಿ. ಮತ್ತು ಬಿ.ಪಿ.ಇಡಿ ಕೋರ್ಸ್‌ಗಳಿಗೆ ನೂತನ ಪಠ್ಯಕ್ರಮವನ್ನು ಅಳವಡಿಸುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ ಬಿ.ಇಡಿ. ಮತ್ತು ಬಿ.ಪಿ.ಇಡಿ ಕೋರ್ಸ್‌ಗಳಿಗೆ ನೂತನ ಪಠ್ಯಕ್ರಮ ಮತ್ತು ನಿಯಮಾವಳಿಗಳನ್ನು ಅಳವಡಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.
IV	2024/03/ IV	ಸ್ನಾತಕೋತ್ತರ ಸಮಾಜಕಾರ್ಯ((M.S.W) ಪದವಿ ಕೋರ್ಸ್‌ನ್ನು ಯು.ಜಿ.ಸಿ.ಯು ನಾನ್–ಪ್ರೊಫೆಷನಲ್ ಕೋರ್ಸ್ ಎಂದು ಪರಿಗಣಿಸಿರುವುದರಿಂದ, ಸಮಾಜಕಾರ್ಯ ಕೋರ್ಸ್ ಪ್ರವೇಶಾತಿ ಶುಲ್ಕ ಕಡಿಮೆ ಆಕರಣೆ ಮಾಡುವ ಕುರಿತು.
ತೀರ್ಮಾನ		ಸ್ನಾತಕೋತ್ತರ ಸಮಾಜಕಾರ್ಯ((M.S.W) ಪದವಿ ಕೋರ್ಸ್‌ನ್ನು ಯು.ಜಿ.ಸಿ.ಯು ನಾನ್–ಪ್ರೊಫೆಷನಲ್ ಕೋರ್ಸ್ ಎಂದು ಪರಿಗಣಿಸಿರುವುದರಿಂದ, ಸ್ನಾತಕೋತ್ತರ ಸಮಾಜಕಾರ್ಯ((M.S.W) ಪದವಿ ವಿದ್ಯಾರ್ಥಿಗಳಿಗೆ ಕಲಾ ನಿಖಾಯದ ಕೋರ್ಸಗಳಿಗೆ

		ಪಡೆಯುವ ಪ್ರವೇಶಾತಿ ಶುಲ್ಕಗಳನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಆಕರಣೆ ಮಾಡಲು ಸಭೆಯು ಅನುಮೋದನೆ ನೀಡಿತು.
V	2024/03/ V	ಗೌರವಾನ್ವಿತ ಕುಲಾಧಿಪತಿಗಳು ಮತ್ತು ರಾಜ್ಯಪಾಲರಿಂದ ಅನುಮೋದನೆಗೊಂಡಿರುವ ಹಾಗೂ ಅನುಮೋದನೆಯಾಗಬೇಕಿರುವ ಪರಿನಿಯಮಾವಳಿಗಳನ್ನು ಮರುಪರಿಶೀಲಿಸಲು ಸಮಿತಿಯನ್ನು ರಚಿಸುವ ಕುರಿತು.
ತೀರ್ಮಾನ		ಗೌರವಾನ್ವಿತ ಕುಲಾಧಿಪತಿಗಳು ಮತ್ತು ರಾಜ್ಯಪಾಲರಿಂದ ಅನುಮೋದನೆಗೊಂಡಿರುವ ಹಾಗೂ ಅನುಮೋದನೆಯಾಗಬೇಕಿರುವ ಪರಿನಿಯಮಾವಳಿಗಳನ್ನು ಮರುಪರಿಶೀಲಿಸಲು ಸಮಿತಿಯನ್ನು ರಚಿಸಲು ಸಭೆಯು ಅನುಮೋದನೆ ನೀಡಿತು.
VI	2024/03/ VI	ವಿಶ್ವವಿದ್ಯಾಲಯಕ್ಕೆ "ಆರ್ ಸಿ ಯುನಿವರ್ಸಿಟಿ ಪ್ರೆಸ್" ನೊಂದಣಿ ಮಾಡಿಸಲು ಮತ್ತು ಹೊಸ ಲಾಂಛನ ಅಳವಡಿಸಿಕೊಳ್ಳುವ ಕುರಿತು
ತೀರ್ಮಾನ		ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ "Digital Publishing Desk" ಸ್ಥಾಪನೆ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಇದಕ್ಕೆ ಸಂಬಂಧಿಸಿದ "ಆರ್.ಸಿ. ಯುನಿವರ್ಸಿಟಿ ಪ್ರೆಸ್" ಗಾಗಿ ನೊಂದಣಿ ಮಾಡಿಸಲು ಮತ್ತು ಹೊಸ ವಿಶ್ವವಿದ್ಯಾಲಯದ ಲಾಂಛನದಲ್ಲಿ ವಿಶ್ವವಿದ್ಯಾಲಯದ ಪೂರ್ಣ ಹೆಸರನ್ನು ಯಥಾವತ್ತಾಗಿ ಇರುವಂತೆ ಅನುಮೋದಿಸಿತು.
VII	2024/03/ VII	UUCMS ತಂತ್ರಾಂಶದ ತೊಂದರೆ ಮತ್ತು ಪರಿಹಾರಗಳ ಕುರಿತು
		UUCMS ತಂತ್ರಾಂಶದಲ್ಲಿ ಆಗುತ್ತಿರುವ ತಾಂತ್ರಿಕ ತೊಂದರೆಗಳು ಹಾಗೂ ಅದರ ಪರಿಹಾರಗಳ ಬಗ್ಗೆ ಚರ್ಚಿಸಿ, ಸರಕಾರಕ್ಕೆ ಅಗತ್ಯ ತುರ್ತು ಪರಿಹಾರಕ್ಕೆ ಮತ್ತು ತಂತ್ರಾಂಶ ಸುಸ್ಥಿತಿಗೆ ಬರುವವರೆಗೆ ಈ ಹಿಂದಿನ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಅನುಮತಿ ನೀಡುವ ಬಗ್ಗೆ ಸರಕಾರಕ್ಕೆ ಮನವಿ ಕೋರಲು ವಿದ್ಯಾವಿಷಯಕ್ ಪರಿಷತ್ ಸಭೆಯು ಒಪ್ಪಿಗೆ ಸೂಚಿಸಿತು.
VIII	2024/03/ VIII	ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆ ಗುಣಮಟ್ಟಗಳ ಬಗ್ಗೆ
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿನ ಪ್ರಶ್ನೆ ಪತ್ರಿಕೆಗಳ ಗುಣಮಟ್ಟಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಮತ್ತು ಕೆಲವು ಪ್ರಶ್ನೆ ಪತ್ರಿಕೆಗಳನ್ನು ಸಭೆಗೆ ಪ್ರಸ್ತುತಪಡಿಸಲಾಯಿತು. ಚರ್ಚಿಸಿದ ಸಭೆಯು ಕಳಪೆ ಗುಣಮಟ್ಟದ ಪ್ರಶ್ನೆಗಳ ಕುರಿತು ಆತಂಕ ವ್ಯಕ್ತಪಡಿಸಿ ಸದಸ್ಯರು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಬಿ.ಓ.ಇ. ಸಮಿತಿ ಸದಸ್ಯರುಗಳಿಗೆ ಈ ಕುರಿತಾಗಿ ಎಚ್ಚರಿಕೆ ನೀಡಲು ತೀರ್ಮಾನಿಸಿತು.
IX	2024/03/ IX	2024-25 ನೇ ಸಾಲಿನಲ್ಲಿ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಯೋಗಾ ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭಿಸುವ ಕುರಿತು.
ತೀರ್ಮಾನ		2024-25 ನೇ ಸಾಲಿನಲ್ಲಿ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಯೋಗಾ ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.
X	2024/03/ X	2025-26 ನೇ ಸಾಲಿನಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್‌ನಲ್ಲಿ Microbiology, Biochemistry, Data-Science, Cyber Security ಹಾಗೂ Nano technology ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.

XI	2024/03/ XI	ಪಿಹೆಚ್.ಡಿ. Criminology and Criminal Justice ಹೆಸರನ್ನು ಪಿಹೆಚ್.ಡಿ. Criminology and Forensic Science ಎಂದು ಬದಲಿಸುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ M.Sc in Criminology and Criminal Justice Programm ನ್ನು M.Sc in Criminology and Forensic Science ಎಂದು 2021–22 ರಿಂದ ಜಾರಿಗೆ ಬಂದಿರುತ್ತದೆ. ಅದೇ ರೀತಿ Ph.D Criminology and Forensic Science ಎಂದು ಜಾರಿಗೆ ತರಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.
XII	2024/03/ XII	ಪಂ. ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ಪರಿನಿಯಮಗಳು, ಪಿ.ಜಿ. ಡಿಪ್ಲೋಮಾ ಕೋರ್ಸ್ ನಿಯಮಾವಳಿ ಮತ್ತು ಪಠ್ಯಕ್ರಮವನ್ನು ಪರಿಶೀಲಿಸಿ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.
XIII	2024/03/ XIII	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಡಳಿತ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಅಜೀಂ ಪ್ರೇಮಜಿ ಫೌಂಡೇಶನ ಇವರೊಂದಿಗೆ ಒಡಂಬಡಿಗೆ(MoU) ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

ಕೊನೆಯದಾಗಿ, ಕುಲಸಚಿವರು(ಮೌ) ಧನ್ಯವಾದಗಳನ್ನು ತಿಳಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ: ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.